ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಫ್ಯಾಕ್ಸ್ : 080-2283758, 2211906
ದೂರವಾಣಿ : 080-2263327
2212652, 2212941

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560 001

ಸಂಖ್ಯೆ: ಕಾಶಿಇ 183 ಅಉಸ ಸಿವಿ1 2003

ದಿನಾಂಕ 28.05.2003

## ಆದೇಶ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆ (ಕಾಲೇಜು ಶಿಕ್ಷಣ) ಯಲ್ಲಿ ವಿಲೀನಗೊಳಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಸರ್ಕಾರದ ಸಚಿವಾಲಯದ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 89 ಡಿಸಿಇ 97, ದಿನಾಂಕ: 26.05.2003.

*****

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ (ವಿಶೇಷ) ನಿಯಮಗಳು 1996 ಮತ್ತು ಇದಕ್ಕೆ ಕಾಲಕಾಲಕ್ಕೆ ಹೊರಡಿಸಲ್ಪಟ್ಟ ತಿದ್ದುಪಡಿಗಳ ಅಡಿಯಲ್ಲಿನ ಅವಕಾಶದನ್ವಯ ಈ ನಿಯಮಾವಳಿಗಳಿಗೆ ಬದ್ಧವಾಗಿರುವ ಷರತ್ತಿಗೊಳಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಲ್ಲಿ ಯುಜಿಸಿ ವೇತನ ಶ್ರೇಣಿ ರೂ.8000–275–13500 ಯಲ್ಲಿ ಉಪನ್ಯಾಸಕರ ಹುದ್ದೆಗಳಲ್ಲಿ ವಿಲೀನಗೊಳಿಸಲಾಗಿದೆ.

(2) ಈ ಉಪನ್ಯಾಸಕರುಗಳಿಗೆ ಸ್ಥಳನಿಯುಕ್ತಿ ಆದೇಶವನ್ನು ಕಾಯ್ದಿರಿಸಿ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯಲ್ಲಿ ಸರ್ಕಾರಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿವಸಗಳೊಳಗೆ ವರದಿ ಮಾಡಿಕೊಂಡು ನಂತರ ಅವರು ಈಗ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಹೊಸ ಸ್ಥಳನಿಯುಕ್ತಿ ಆದೇಶ ಹೊರಡಿಸುವವರೆಗೆ ಕಾರ್ಯನಿರ್ವಹಿಸತಕ್ಕದ್ದು.

(3) ಇವರುಗಳ ಸೇವಾ ವಿಲೀನವು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳ ನಿಯಮ:ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ.

(4) ಇವರು ಪರಿವೀಕ್ಷಣಾ ಅವಧಿಯಲ್ಲಿ, 1974ರ ಕರ್ನಾಟಕ ನಾಗರಿಕ ಸೇವಾ (ಸೇವಾ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಾವಳಿಯಲ್ಲಿ ನಿಗದಿಪಡಿಸಿರುವ ಕನ್ನಡ ಭಾಷಾ ಮತ್ತು ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕೆಂಬ ಷರತ್ತನ್ನು ವಿಧಿಸಲಾಗಿದೆ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ಯುಜಿಸಿ ಮಾರ್ಗಸೂಚಿಗಳ ಅನ್ವಯ ಓರಿಯಂಟೇಶನ್ ಕೋರ್ಸ್‌ನಲ್ಲಿ ತರಬೇತಿ ಹೊಂದತಕ್ಕದೆಂದು ಹಾಗೂ ಕರ್ತವ್ಯ ನಿರ್ವಹಣಾ ವರದಿಗಳು ತೃಪ್ತಿಕರವಾಗಿರತಕ್ಕದ್ದು.

(5) ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಈ ಕೆಳಕಂಡ ಮೂಲ ಪ್ರಮಾಣಪತ್ರಗಳನ್ನು ಪರಿಶೀಲಿಸಿ ವಾಪಸ್ಸು ಮಾಡುವ ಸಲುವಾಗಿ ಸಂಬಂಧಿಸಿದ ಪ್ರಾಂಶುಪಾಲರ ಮುಂದೆ ಹಾಜರುಪಡಿಸಬೇಕು:

1. ಜನ್ಮದಿನಾಂಕದ ಬಗ್ಗೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಅಥವಾ ಕ್ಯುಮುಲೇಟಿವ್ ರೆಕಾರ್ಡ್;
2. ಪದವಿ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳು;
3. ಎನ್‌ಇಟಿ:ಎಸ್‌ಎಲ್‌ಇಟಿ:ಎಂ ಫಿಲ್:ಪಿಹೆಚ್.ಡಿ ಇತ್ಯಾದಿ ಪ್ರಮಾಣಪತ್ರಗಳು;
4. ಮೀಸಲಾತಿಯ ಬಗ್ಗೆ ಪ್ರಮಾಣಪತ್ರ (ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ);
5. ಜಾತಿ ಮತ್ತು ವರಮಾನದ ಬಗ್ಗೆ ಮೂಲ ಪ್ರಮಾಣಪತ್ರ (ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ);
6. ಅಭ್ಯರ್ಥಿಗಳ ಸ್ವಂತ ಸ್ಥಳದ ಯಾರಾದರು ಇಬ್ಬರು ಪ್ರಮುಖರಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಕೊಡಲ್ಪಟ್ಟ ಗುಣ ಸಮರ್ಥನಾ ಪತ್ರಗಳು (ಕೆಲಸಕ್ಕೆ ಹಾಜರಾಗುವ ದಿನಾಂಕದಂದು ಈ ಪ್ರಮಾಣಪತ್ರಗಳು ಆರು (6) ತಿಂಗಳಿಗಿಂತ ಹಳೆಯದಾಗಿರಬಾರದು);

(6) ಕೆಳಕಂಡ ಘೋಷಣಾ ಪತ್ರವನ್ನು ಸಹ ಹಾಜರುಪಡಿಸಬೇಕು. -

1. ಅವರು ಯಾವುದೇ ಕಾಲೇಜು ಅಥವಾ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿಲ್ಲವೆಂದೂ;
2. ಸರ್ಕಾರದಲ್ಲಿ ಉಪನ್ಯಾಸಕರಾಗಿ ಅವರ ನೇಮಕಾತಿಯು ಶುದ್ಧಾಂಗ ತಾತ್ಕಾಲಿಕವೆಂದೂ ಹಾಗೂ ಯಾವುದೇ ಕಾರಣಗಳನ್ನು ಕೊಡದೆ ಮತ್ತು ಮುನ್ಸೂಚನೆಯಿಲ್ಲದೆ ಸೇವಾಪೂರ್ವ ಅವಧಿಯಲ್ಲಿ ಅವರನ್ನು ಸೇವೆಯಿಂದ ತೆಗೆದುಹಾಕಬಹುದಾಗಿದೆಯೆಂದು;
3. ಈ ನೇಮಕಾತಿಯು ಸಂಬಂಧಪಟ್ಟ ಅಧಿಕಾರಿಗಳಿಂದ ಅವರ ಜಾತಿ:ಆದಾಯ ಮತ್ತು ಪೂರ್ವ-ವೃತ್ತಾಂತದ ಪರಿಶೀಲನೆಗೊಳಪಟ್ಟಿದೆಯೆಂದೂ; ಮತ್ತು
4. ಮೇಲ್ಕಂಡ ಷರತ್ತುಗಳಿಗೆ ಅವರು ಒಪ್ಪಿರುವರೆಂದೂ.

(7) ಕೆಲಸಕ್ಕೆ ಹಾಜರಾಗಲು ಪ್ರಯಾಣ ಭತ್ಯೆಯನ್ನು ಕೊಡಲಾಗುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು 28/5

ಇವರಿಗೆ:

(1) ರವೀಂದ್ರ.ಎಸ್. ಕನ್ನಡ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಕೋಲಾರ.

(2) ಪ್ರಾಂಶುಪಾಲರು ಸರ್ಕಾರಿ ಬಾಲಕರ ಕಾಲೇಜು ಕೋಲಾರ. – ಮಾಹಿತಿಗಾಗಿ ಹಾಗೂ ಮೇಲ್ಕಂಡ ಷರತ್ತುಗಳನ್ನು ಪರಿಪಾಲಿಸಿ ಸಂಬಂಧಿಸಿದವರು ತಮ್ಮ ಕಾಲೇಜಿನಲ್ಲಿ ವರದಿ ಮಾಡಿಕೊಂಡ ಬಗ್ಗೆ ಕೇಂದ್ರ ಕಛೇರಿಗೆ ವರದಿಯನ್ನು ನೀಡುವುದು.

(3) ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು:ಮೈಸೂರು:ಮಂಗಳೂರು:ಶಿವಮೊಗ್ಗ:ಧಾರವಾಡ:ಗುಲ್ಬರ್ಗಾ – ಮಾಹಿತಿಗಾಗಿ

(4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ

(5) ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು – ಮಾಹಿತಿಗಾಗಿ

(6) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ವಿಭಾಗಗಳ ಅಧೀಕ್ಷಕರು – ಅಗತ್ಯವಿದ್ದೆಡೆ ಸೂಕ್ತ ಕ್ರಮಕ್ಕಾಗಿ.

(7) ಕಛೇರಿ ಪ್ರತಿ

ಎಸ್ಸುಮಾ

| 1 | 2 | 3 | 4 | 5 |
|---|---|---|---|---|
| 7 | ಮಲ್ಲೇಶ್ ಬಿ.ಪಿ.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಕೆ.ಆರ್.ನಗರ | 10-03-1963 | 2–ಎ | -- |
| 8 | ದಾಕ್ಷಾಯಿಣಮ್ಮ ಎಂ.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ನ್ಯಾಮತಿ | 13-07-1961 | ಸಾ.ಅ. | -- |
| 9 | ನಾಗರಾಜು ಎಸ್.ಎಸ್.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಗುಬ್ಬಿ | 01-06-1967 | ಪ.ಜಾ. | -- |
| 10 | ನಾಗಣ್ಣ ಎನ್.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಪಿರಿಯಾಪಟ್ಟಣ | 24-06-1962 | ಸಾ.ಅ. | -- |
| 11 | ರವೀಂದ್ರ ಎಸ್.<br>ಸರ್ಕಾರಿ ಬಾಲಕರ ಕಾಲೇಜು<br>ಕೋಲಾರ. | 26-05-1963 | 2–ಬಿ | ಸಾ.ಅ. |
| 12 | ಸತೀಶ್‌ಚಂದ್ರ ಡಿ.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಪಿರಿಯಾಪಟ್ಟಣ | 13-06-1963 | ಸಾ.ಅ. | -- |
| 13 | ಮಹಾದೇವ ಬಿ.ಪಿ.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಹೊಸನಗರ | 21-05-1968 | 2–ಎ | ಸಾ.ಅ. |
| 14 | ವಿರೂಪಾಕ್ಷಪ್ಪ ಹೆಚ್.ಎಸ್.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ನ್ಯಾಮತಿ | 14-01-1966 | ಸಾ.ಅ. | -- |
| 15 | ಕೃಷ್ಣಪ್ಪ ವೈ.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಕುಣಿಗಲ್ | 08-05-1966 | ಪ.ಜಾ. | -- |

| 1 | 2 | 3 | 4 | 5 |
| --- | --- | --- | --- | --- |
| ವಿಷಯ : ಭೂಗೋಳ ಶಾಸ್ತ್ರ | | | | |
| 70 | ಕುಮ್ಮೂರ ಜಿ.ಎಸ್.<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಹಿರೇಕೆರೂರು | 01-04-1965 | ಸಾ.ಅ. | -- |
| ವಿಷಯ : ಗೃಹ ವಿಜ್ಞಾನ | | | | |
| 71 | ಕೌಸಲ್ಯ ಡಿ.ಎಸ್.<br>ವಿ.ಹೆಚ್.ಡಿ.ಕಾಲೇಜು<br>ಬೆಂಗಳೂರು | 14-03-1962 | ಸಾ.ಅ. | -- |

(ಶೌರಿ ಜಾಂತು) 26/6/12

ಸರ್ಕಾರದ ಉಪ ಕಾರ್ಯದರ್ಶಿ

ಉನ್ನತ ಶಿಕ್ಷಣ ಇಲಾಖೆ

ಪ್ರಿನ್ಸಿಪಾಲರು

ಸರ್ಕಾರಿ ಪ್ರಥಮದರ್ಜೆ ಕಾಲೇಜು